
ಮಾತು, ಅನುಭವಗಳೇ ಸತ್ಯವನ್ನರಿಯುವ ಸರಿಯಾದ ಮಾನ ದಂಡ. ಸತ್ಯ ಹಾಗೂ ಜಗತ್ತನ್ನು ನಾವು ಈ ಹಿನ್ನೆಲೆಯಿಂದ ಅರಿತುಕೊಳ್ಳಬೇಕು. ಶ್ರೀಮಾತೆಯವರ ಮಾತುಗಳಲ್ಲಿ ಈ ಬಗೆಯ ಅಸಾಧಾರಣ ಅನುಭವಗಳು ವಿಪುಲವಾಗಿ ಕಂಡು ಬರುತ್ತವೆ. ಅವುಗಳನ್ನು ಅರ್ಥಮಾಡಿಕೊಳ್ಳುವ ನೆಪದಲ್ಲಿ ನಮ್ಮ ಅಜ್ಞಾನ ತೊಳೆದುಹೋಗುವುದು; ಹೊಸಜಗತ್ತು ನಮಗೆ ತೆರೆಯುವುದು.

### ೬. ಮಾತೆಯ ವಿಶಾಲ ಮಡಿಲು

ಇವೆಲ್ಲಕ್ಕಿಂತ ಮಿಗಿಲಾಗಿ ಶ್ರೀಮಾತೆ ಇಡೀ ಜಗತ್ತಿಗೆ ತೋರಿದ ಮಾತೃಪ್ರೇಮ, ವಾತ್ಸಲ್ಯ ಎಣೆಯಿಲ್ಲದ ಒಂದು ಕೃಪಾವರ್ಷದಂತೆ ಕಂಡುಬರುತ್ತದೆ. ಸಾಧು ಸಜ್ಜನರಿರಲಿ, ಸ್ತ್ರೀಪುರುಷ ಭಕ್ತರಿರಲಿ, ಚಿಕ್ಕ ಮಕ್ಕಳಾಗಲಿ, ದಟ್ಟದರಿದ್ರರೂ ದುಷ್ಟರೂ ದೀನದುಃಖಿಗಳೂ ಆದವರಿರಲಿ – ಎಲ್ಲರಿಗೂ ಅವರು ಮಾತೆಯಾಗಿದ್ದರು. ತಾಯಿ ಹೇಗೆ ತನ್ನೆಲ್ಲ ಮಕ್ಕಳನ್ನೂ ಒಂದೇ ರೀತಿ ಪ್ರೀತಿಸುವಳೋ, ಅದೇ ರೀತಿ ಶ್ರೀಮಾತೆ ಆಧ್ಯಾತ್ಮಿಕ ನೆಲೆಯ ಜಗನ್ಮಾತೆಯಾಗಿ ಪ್ರತಿಯೊಬ್ಬನನ್ನೂ ಪ್ರೀತಿಸಿದರು. ವಿಶೇಷವಾಗಿ ಆರ್ತರನ್ನು, ಪತಿತರನ್ನು ಕೈ ಹಿಡಿದು ಮೇಲೆತ್ತಿದರು. ಅವರ ಪ್ರೀತಿಗೆ ಒಳಗಾಗದ ಯಾವ ವ್ಯಕ್ತಿಯೂ ಇರಲಿಲ್ಲ; ಅಷ್ಟೇಕೆ ಒಂದು ಕೀಟ, ಇರುವೆ, ಗಿಡಮರಗಳೂ ಅವರ ಕೃಪೆಗೆ ಪಾತ್ರವಾದವು. ಇಡೀ ಜೀವ ಜಗತ್ತಿನ ಅಂತರ್ಯಾಮಿಯಾದ ತಾಯಿಯಾಗಿದ್ದರು ಅವರು. ''ನಾನು ದುಷ್ಟರ ತಾಯಿ, ಅಂತೆಯೇ ಉತ್ತಮರ ತಾಯಿ. ಭಯಪಡಬೇಡ. ಎಂದಾದರೂ ನಿನಗೆ ಕಷ್ಟ ಬಂದಾಗ ಹೇಳಿಕೋ, ನನಗೊಬ್ಬಳು ತಾಯಿ ಇದ್ದಾಳೆ ಅಂತ'' ಎಂದಿದ್ದಾರೆ ಶ್ರೀಮಾತೆ. ಎಂಥ ಭರವಸೆಯ ನುಡಿಗಳವು! ನಮ್ಮ ತಾಯಿ ಅಂತಿಂಥ ತಾಯಿಯಲ್ಲ, 'ಜಗನ್ಮಾತೆ.' ಎಲ್ಲರನ್ನೂ ಕತ್ತಲೆಯ ಪ್ರಪಂಚದಿಂದ ಪಾರುಮಾಡುವ ಜ್ಯೋತಿರ್ಮಯಿ ಆಕೆ. ಒಂದು ಕ್ಷಣ ಅವರ ನೆನಪು ಜನ್ಮಜನ್ಮಾಂತರದ ಪಾಪರಾಶಿಯನ್ನು ನಾಶಮಾಡುವುದು. ದಿವ್ಯಪ್ರೇಮದ ಅನಂತ ಸಾಗರದಲ್ಲಿ ನಮ್ಮ ಪಯಣ ಪವಿತ್ರತೆ, ಧನ್ಯತೆಗಳಲ್ಲಿ ಮುಳುಗೇಳುತ್ತ ಸಾಗುವುದು.

✷

## ಸ್ವಾಮಿ ಶಾರದಾನಂದರ ಮಾತೃಭಕ್ತಿ



ಶಾರದಾನಂದರಿಗೆ ತಮ್ಮನ್ನು ತಾವು ಶ್ರೀಮಾತೆಯವರ ಬಾಗಿಲು ಕಾಯುವವನು ಎಂದು ಕರೆದುಕೊಳ್ಳುವುದರಲ್ಲಿ ಬಹಳ ಹೆಮ್ಮೆ. ಕೊಲ್ಕತ್ತದ ತಾಯಿಯವರ ಮನೆಯ ಪ್ರವೇಶದ್ವಾರದ ಸಮೀಪದಲ್ಲಿದ್ದ ತಮ್ಮ ಸಣ್ಣ ಕೊಠಡಿಯಲ್ಲಿದ್ದುಕೊಂಡು, ಶ್ರೀಮಾತೆಯವರಿಗೆ ಪ್ರಣಾಮ ಮಾಡುವುದಕ್ಕೆ ಎಂದು ಮೆಟ್ಟಿಲು ಹತ್ತಿಹೋಗುವ ಭಕ್ತರ ಮೇಲೆ ಯಾವಾಗಲೂ ಒಂದು ಕಣ್ಣಿಟ್ಟಿರುತ್ತಿದ್ದರು. ಅದೇನೂ ಸುಲಭವಾದ ಕೆಲಸವಾಗಿರಲಿಲ್ಲ, ಒಂದು ಸಲ ಭಕ್ತನೊಬ್ಬನು ತುಂಬ ದೂರದಿಂದ ಉದ್ಬೋಧನಕ್ಕೆ ನಡೆದುಕೊಂಡು ಬಂದಿದ್ದನು. ಆಗ ತುಂಬ ಸೆಕೆ – ಮಧ್ಯಾಹ್ನ ಸುಮಾರು ಮೂರುಗಂಟೆ ಇರಬಹುದು. ಆಗತಾನೆ ಇನ್ನೊಬ್ಬ ಭಕ್ತರ ಮನೆಯಿಂದ ಹಿಂದಿರುಗಿದ್ದ ಶ್ರೀಮಾತೆಯವರು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ಶಾರದಾನಂದರು ಆ ಭಕ್ತನಿಗೆ, ''ನಾನೀಗ ನಿನಗೆ ಮೇಲೆ ಹೋಗಲು ಬಿಡಲಾರೆ; ಶ್ರೀಮಾತೆಯವರಿಗೆ ತುಂಬ ಆಯಾಸವಾಗಿದೆ'' ಎಂದರು. ''ಅವರು ನಿಮಗೆ ಮಾತ್ರ ತಾಯಿಯೇನು?'' ಎನ್ನುತ್ತ ಆ ಭಕ್ತನು ಸ್ವಾಮಿಗಳನ್ನು ಪಕ್ಕಕ್ಕೆ ತಳ್ಳಿ ಮೇಲಕ್ಕೆ ಹತ್ತಿ ಶ್ರೀಮಾತೆಯವರ ಬಳಿಗೆ ಹೋದನು. ಕ್ಷಿಪ್ರದಲ್ಲಿಯೇ ತನ್ನ ಈ ನಡತೆಗೆ ಪಶ್ಚಾತ್ತಾಪಪಟ್ಟ ಅವನು ತಾನು ಹೊರಕ್ಕೆ ಹೋಗುವಾಗ ಸ್ವಾಮಿಗಳು ಅಲ್ಲಿಲ್ಲದಿರಲಿ ಎಂದು ಮನಸ್ಸಿನಲ್ಲೇ ಪ್ರಾರ್ಥಿಸಿಕೊಂಡನು. ತಾನು ಮಾಡಿದ ತಪ್ಪನ್ನು ಶ್ರೀಮಾತೆಯವರಿಗೂ ಹೇಳಿ ಕ್ಷಮಾಪಣೆ ಬೇಡಿದನು. ಅವರೂ ಅವನಿಗೆ ಸಮಾಧಾನ ಮಾಡಿ ಧೈರ್ಯಕೊಟ್ಟರು. ಅವನತಶಿರನಾಗಿ ಕೆಳಗಿಳಿದು ಬಂದ ಅವನು ನೋಡುತ್ತಾನೆ, ಸ್ವಾಮಿಗಳು ಮೊದಲು ಇದ್ದಲ್ಲೇ ಕುಳಿತಿದ್ದಾರೆ! ದಯಮಾಡಿ ತನ್ನ ಅನುಚಿತ ವರ್ತನೆಯನ್ನು ಕ್ಷಮಿಸಬೇಕೆಂದು ಅವನು ಸ್ವಾಮಿಗಳನ್ನು ಬೇಡಿದನು. ಶಾರದಾನಂದರು ಅವನನ್ನು ಆಲಿಂಗಿಸಿಕೊಂಡು, ''ನನ್ನನ್ನು ನೋಯಿಸಿದೆನೆಂದು ಏಕೆ ಅಂದುಕೊಳ್ಳುತ್ತೀ? ಅಂತಹ ವ್ಯಾಕುಲತೆ ಇಲ್ಲದಿದ್ದರೆ ಯಾರಾದರೂ ಶ್ರೀಮಾತೆಯವರನ್ನು ನೋಡಲು ಸಾಧ್ಯವೆ?'' ಎಂದರು.

*('ದೇವರೊಡನೆ ಬಾಳಿದವರು' ಗ್ರಂಥದಿಂದ ಭಾಗ ೧, ಪು.೩೯೦)*

# ಶ್ರೀಮಾತೆ : ದಕ್ಷಿಣೇಶ್ವರದಲ್ಲಿ ನಾನು ಕಂಡಂತೆ

ಭವತಾರಿಣೀ ದೇವಿ



**ಭವತಾರಿಣೀ ದೇವಿ (೧೮೭೭-೧೯೭೩) ಸುಪ್ರಸಿದ್ಧ ಬಂಗಾಳಿ ಸಾಹಿತ್ಯ ಪ್ರಕಾಶನ ಸಂಸ್ಥೆ 'ಬಸುಮತಿ ಸಾಹಿತ್ಯ ಮಂದಿರ'ದ ಸ್ಥಾಪಕರೂ, ಮಾಲಿಕರೂ ಆಗಿದ್ದ ಶ್ರೀ ಉಪೇಂದ್ರನಾಥ ಮುಖ್ಯೋಪಾಧ್ಯಾಯರ (೧೮೬೮-೧೯೧೯) ಸಹಧರ್ಮಿಣಿಯಾಗಿದ್ದರು. ಉಪೇಂದ್ರನಾಥರು ಶ್ರೀರಾಮಕೃಷ್ಣರ ಗೃಹಸ್ಥ ಶಿಷ್ಯರಾಗಿದ್ದರು. ತಮ್ಮ ಬಾಲ್ಯವನ್ನು ಅತ್ಯಂತ ಬಡತನದಲ್ಲಿ ಕಳೆದ ಉಪೇಂದ್ರನಾಥರು ಮುಂದೆ ಶ್ರೀರಾಮಕೃಷ್ಣರ ಆಶೀರ್ವಾದದ ಬಲದಿಂದ ಆಗರ್ಭ ಶ್ರೀಮಂತರಾದರು. ಅವರಿಗೆ ಶ್ರೀರಾಮಕೃಷ್ಣರ ನೇರ ಶಿಷ್ಯಂದಿರ ಒಡನಾಟವಿತ್ತು. ಶ್ರೀರಾಮಕೃಷ್ಣರು ಹಾಗೂ ಶ್ರೀಶಾರದಾದೇವಿಯವರು ಅನಾಥೆಯಾಗಿದ್ದ ಭವತಾರಿಣೀದೇವಿಯನ್ನು ತಮ್ಮ ಮಗಳಂತೆಯೇ ಕಂಡರು. ಅವರೇ ಉಪೇಂದ್ರನಾಥನೊಂದಿಗೆ ಅವಳ ವಿವಾಹವನ್ನು ಏರ್ಪಡಿಸಿದರು. ಭವತಾರಿಣೀ ದೇವಿಯ ತಪಸ್ವಿನಿಯಂತಹ ಜೀವನ ಎಲ್ಲರ ಭಕ್ತಿ, ಗೌರವಗಳಿಗೆ ಪಾತ್ರವಾಯಿತು. ಅವರನ್ನು ಶ್ರೀರಾಮಕೃಷ್ಣರ ಭಕ್ತವೃಂದ 'ಬಸುಮತಿ ಮಾ' ಎಂದೇ ಕರೆಯುತ್ತಿತ್ತು. ತೀರ್ಥಯಾತ್ರೆ, ಭಕ್ತಿ-ಸಾಧನೆ ಗಳಿಂದ ಅವರು ತಮ್ಮ ಜೀವನದುದ್ದಕ್ಕೂ ಶ್ರೀರಾಮಕೃಷ್ಣ-ಶ್ರೀಶಾರದಾದೇವಿಯವರ ಚಿಂತನೆಗಳಲ್ಲೇ ಕಾಲಯಾಪನೆ ಮಾಡಿದರು. ಅವರು ಬರೆದ ಸ್ಮೃತಿಲೇಖನ ಅನೇಕ ದೃಷ್ಟಿಗಳಿಂದ ಶ್ರೀಮಾತೆಯವರ ಅಪೂರ್ವ ವ್ಯಕ್ತಿತ್ವವನ್ನು ಚಿತ್ರಿಸುತ್ತದೆ. ಶ್ರೀಮಾತೆಯವರ ದಕ್ಷಿಣೇಶ್ವರದ ದಿನಗಳನ್ನು ಕುರಿತು ಇಲ್ಲಿ ಲಭಿಸುವ ಕೆಲವು ಮಾಹಿತಿಗಳು ಬೇರೆಲ್ಲೂ ಸಿಗುವುದಿಲ್ಲ. 'ಉದ್ಬೋಧನ ಕಾರ್ಯಾಲಯ'ವು ಬಂಗಾಳಿಯಲ್ಲಿ ಪ್ರಕಟಿಸಿದ 'ಮಾಯೇರ್ ಪದಪ್ರಾಂತೇ' ಎಂಬ ನಾಲ್ಕು ಸಂಪುಟಗಳ ಸ್ಮೃತಿಗ್ರಂಥದಿಂದ ಈ ಲೇಖನವನ್ನು ಆರಿಸಲಾಗಿದೆ. ಭವತಾರಿಣೀ ದೇವಿಯ ಈ ಸ್ಮೃತಿಚಿತ್ರವನ್ನು ಕನ್ನಡಕ್ಕೆ ಅನುವಾದಿಸಿ ನೀಡುತ್ತಿದ್ದೇವೆ.**

*ಅನು : ಸ್ವಾಮಿ ಜ್ಞಾನಯೋಗಾನಂದ*

ಝಾಮಾಪುಕುರದಿಂದ ಶ್ರೀರಾಮಕೃಷ್ಣರು ನನ್ನನ್ನು ಕರೆದುಕೊಂಡು ಬಂದಾಗ ನಾನಿನ್ನೂ ಸಣ್ಣ ಮಗು. ಇನ್ನೂ ಮಾತು ಬರುತ್ತಿರಲಿಲ್ಲ; ಮೂಕಿಯಾಗಿದ್ದೆ. ಅದಕ್ಕೇ ನನ್ನ ಹೆಸರು 'ಮೂಕಿ' ಎಂದಾಗಿತ್ತು. ಮಕ್ಕಳಿಗೆ ತಾಯಿಯೆಂದರೆ ಪಂಚ ಪ್ರಾಣ. ಆದರೆ ನನಗೆ ತಾಯಿ ಬದಲಾಗಿದ್ದರಿಂದ ಯಾವುದೇ ಮಾನಸಿಕ ಏರು ಪೇರು ಉಂಟಾದದ್ದು ನನ್ನ ಅರಿವಿಗೆ ಬರಲಿಲ್ಲ. ಝಾಮಾಪುಕುರದಿಂದ ನನ್ನ ತಾಯಿಯಿಂದ ನಾನು ಏನನ್ನೂ ಪಡೆಯುತ್ತಿದ್ದೆನೋ, ಅದಕ್ಕಿಂತ ಅತಿ ಹೆಚ್ಚಿನದನ್ನು ನಾನು ಈ ತಾಯಿಯಿಂದ (ಶ್ರೀಮಾತೆಯವರಿಂದ) ಪಡೆದೆ. ಶ್ರೀರಾಮಕೃಷ್ಣರು ಪ್ರೀತಿಯಿಂದ ನನಗೆ ಅವರಿದ್ದ ದೇವಾಲಯದ ಜಗನ್ಮಾತೆಯ ಹೆಸರನ್ನು ಇಟ್ಟು ನಾಮಕರಣ ಮಾಡಿದರು- 'ಭವತಾರಿಣಿ' ಅಂತ. ಅದನ್ನು ಶ್ರೀಮಾತೆ ಸಣ್ಣದಾಗಿಸಿ 'ಭವಿ' ಅಂತಲೋ, ಕೆಲವೊಮ್ಮೆ 'ಭವಸುಂದರಿ' ಅಂತಲೋ ಕರೆಯುತ್ತಿದ್ದರು. ಝಾಮಾಪುಕುರದ ಒಬ್ಬಾಕೆ ತಾಯಿ ನನ್ನನ್ನು ಎಸೆದುಬಿಟ್ಟಿದ್ದರು ಅಂತ ನನಗೆ ನೆನಪಾಗುತ್ತಲೇ ಇರಲಿಲ್ಲ.

ದಕ್ಷಿಣೇಶ್ವರದಲ್ಲಿ ನಾನು ತುಂಬಾ ಕೆಲಸಗಳನ್ನು ಮಾಡುತ್ತಿದ್ದೆ. ಇಲ್ಲ, ಶ್ರೀಮಾತೆಯವರೇ ಏನೇನೋ ಕೆಲಸಗಳನ್ನು ಕೊಡುತ್ತಿದ್ದರು. ಜೊತೆಗೆ, ''ಹೋಗು ಭವಿ, ಹೂ ಕಿತ್ತುಕೊಂಡು ಬಾ; ದೇವರಪೂಜೆಯ ಪಾತ್ರೆಗಳನ್ನು ಹಂಸಪುಕುರದ ಕೊಳದಲ್ಲಿ ತೊಳೆದುಕೊಂಡು ಬಾ. ಬಟ್ಟೆಗಳನ್ನು ಬಕುಲತಲಾ ಸ್ನಾನಘಟ್ಟದಲ್ಲಿ ಒಗೆದು ತಾ, ಅನಂತರ ಹೊರಗೆ ಒಣಗಲು ಹಾಕು'' ಎನ್ನುತ್ತಿದ್ದರು. ನಾನು ಅದನ್ನೆಲ್ಲ ಮಾಡುತ್ತಿದ್ದೆ. ಅನಂತರ, ''ಹೋಗು, ಠಾಕುರ್ (ಶ್ರೀರಾಮಕೃಷ್ಣರು) ಏನು ಮಾಡುತ್ತಿದ್ದಾರೆ ಅಂತ ನೋಡಿ ಬಾ'' ಎನ್ನುತ್ತಿದ್ದರು. ಒಂದು ದಿನದಲ್ಲಿ ಈ ರೀತಿ ಅವರ ಬಳಿಗೆ ಹಲವು ಬಾರಿ ಕಳುಹಿಸುತ್ತಿದ್ದರು. ನಾನೂ ಹೋಗುತ್ತಿದ್ದೆ. ಶ್ರೀಮಾತೆ ನನ್ನನ್ನು ಹೆಚ್ಚುಹೊತ್ತು ಕುಳಿತುಕೊಳ್ಳಲು ಬಿಡುತ್ತಿರಲಿಲ್ಲ. ಏನಾದರೂ ಸಣ್ಣಪುಟ್ಟ ಕೆಲಸಗಳನ್ನು ಹೇಳುತ್ತಿದ್ದರು.

ಶ್ರೀಮಾತೆ ತುಂಬ ಕೆಲಸ ಕೊಡುತ್ತಿದ್ದರು ಅಂದರೆ ನನ್ನನ್ನು ತುಂಬಾ ದಂಡಿಸುತ್ತಿದ್ದರು ಅಂತ ಅರ್ಥವಲ್ಲ. ಹಾಗೆ ಹೇಳಲಾರೆ. ಅಷ್ಟೇನೂ ಶ್ರಮವಿಲ್ಲದ ಕೆಲಸಗಳನ್ನು ಕೊಡುತ್ತಿದ್ದರು; ಅದರೊಂದಿಗೆ ಒಳ್ಳೆಯ ಮಾತುಗಳನ್ನು ಆಡುತ್ತಿದ್ದರು. ಬೆಳಗ್ಗೆ ಎಂಟರಿಂದ ಒಂಭತ್ತು ಗಂಟೆ ನಡುವೆ ಶ್ರೀಮಾತೆ ಪೂಜೆಗೆ ಕುಳಿತುಕೊಳ್ಳುತ್ತಿದ್ದರು. ಮೊದಮೊದಲು ನಾನು ಹೂ ಕೀಳುವುದು, ಗಂಧ ತೇಯುವುದು, ಗರಿಕೆ ಕೊಯ್ದು

ತರುವುದು ಮೊದಲಾದ ಕೆಲಸಗಳನ್ನು ಮಾಡಬೇಕಿತ್ತು. ಬಿಲ್ವ ಪತ್ರೆ, ತುಳಸೀದಳಗಳು ಇದ್ದೇ ಇರುತ್ತಿದ್ದವು. ಬಿಲ್ವಪತ್ರೆಗಳೆಲ್ಲ ಒಂದೇ ಗಾತ್ರದವು ಆಗಿರಬೇಕು, ಚಿಕ್ಕ ಗಾತ್ರದವು ಕೂಡದು. ಶ್ರೀಮಾತೆಯವರ ಒಪ್ಪ ಓರಣವನ್ನು ನೋಡುವುದೇ ಒಂದು ಆನಂದ. ಅವರು ಎಲ್ಲವನ್ನೂ ಕಲಾತ್ಮಕವಾಗಿ ಜೋಡಿಸಿಟ್ಟರೆ ಅದು ಪೂಜೆ ಮಾಡಲು ಇರಿಸಿದ ಪಂಚಪಾತ್ರೆ* ಯಂತಿರುತ್ತಿತ್ತು. ಗಂಧತೇಯುವಾಗ, ಹೂಗಳನ್ನು ಒಂದೊಂದಾಗಿ ಒರೆಸಿ ಇಡುವುದು ಈ ಕೆಲಸಗಳನ್ನು ಮಾಡುವಾಗ ಶ್ರೀಮಾತೆಯವರ ಕಲಾಪೂರ್ಣತೆ ಅದೆಷ್ಟು ಎಂಬುದನ್ನು ನಾನು ಮಾತಿನ ಮೂಲಕ ವರ್ಣಿಸಲಾರೆ. ಅವರು ಎಷ್ಟೊಂದು ವೇಗವಾಗಿ ಕೆಲಸ ಮಾಡಿ ಮುಗಿಸುತ್ತಿದ್ದರು ಎನ್ನುವುದನ್ನು ಊಹಿಸಲೂ ಸಾಧ್ಯವಾಗದು. ಹಣ್ಣುಗಳನ್ನು ಕತ್ತರಿಸುವುದು, ತಾಂಬೂಲ ಸಿದ್ಧಪಡಿಸಿ ಇಡುವುದು ಅವರಲ್ಲಿ ಒಂದು ವಿಶೇಷ ಕಲೆಯಾಗಿತ್ತು. ಅದನ್ನೆಲ್ಲ ನೋಡಿದವರು ಅವಾಕ್ಕಾಗಿ ನಿಂತು ನೋಡುತ್ತಿದ್ದರು. ಆಗ ನನಗೆ ಇದೊಂದೂ ಅರ್ಥವಾಗುತ್ತಿರಲಿಲ್ಲ. ಶ್ರೀಮಾತೆ ನನಗೆ ಪ್ರತಿಯೊಂದನ್ನು ಕೈ ಹಿಡಿದು ತೋರಿಸಿ ಕಲಿಸುತ್ತಿದ್ದರು. ನಹಬತ್‌ಖಾನೆ ತೀರ ಸಣ್ಣ ಕೋಣೆಯಾಗಿತ್ತು; ಅದರಲ್ಲಿ ಅವರ ಇಡೀ ಸಂಸಾರ ನಡೆಯಬೇಕು. ಅದೊಂದು ಅಪೂರ್ವವಾದ, ಪರಿಪೂರ್ಣತೆಯಿಂದ ಕೂಡಿದ, ಕಲಾತ್ಮಕವಾದ ದಿವ್ಯಧಾಮವೆಂಬಂತಿತ್ತು. ಅದು ದೇವಾಲಯವನ್ನೇ ಮೀರಿಸುವಂತಿತ್ತು.

ಶ್ರೀಮಾತೆಯವರು ಪೂಜೆ ಮಾಡಲು ಕುಳಿತುಕೊಂಡಾಗ ಅವರನ್ನು ಗುರುತಿಸುವುದು ಕಷ್ಟವಾಗುತ್ತಿತ್ತು. ಅವರು ಹೆಚ್ಚು ಹೊತ್ತು ಪೂಜೆಗೆ ಕುಳಿತುಕೊಳ್ಳುತ್ತಿರಲಿಲ್ಲ; ಆದರೆ ಇಡೀ ಸನ್ನಿವೇಶವೇ ಬದಲಾಗಿ ಬಿಡುತ್ತಿತ್ತು. ಅಂಥ ವೇಳೆ ಅವರ ಸಮೀಪದಲ್ಲಿದ್ದರೆ ದೇಹ ನಡುಗುತ್ತಿತ್ತು. ಪೂಜೆ ಮುಗಿದ ನಂತರ ಅವರು ಕರೆಯುತ್ತಿದ್ದರು, ''ಭವಿ, ಎಲ್ಲಿಗೆ ಹೋದೆ? ಬಾ, ಇಲ್ಲಿ ತಲೆಬಾಗಿ ನಮಸ್ಕಾರ ಮಾಡು. ಹೇಳು, 'ಠಾಕುರ್, ನನ್ನನ್ನು ನಿನ್ನವರನ್ನಾಗಿ ಮಾಡು. ನನ್ನ ಕೈಹಿಡಿದುಕೊಂಡಿರು' ಅಂತ. ತಿಳಿಯಿತೇ? (ಪೂಜೆಯ ಆಸನದಲ್ಲಿದ್ದ ದೇವರ ಚಿತ್ರವನ್ನು ತೋರಿಸಿ) ಠಾಕೂರರನ್ನು ಚೆನ್ನಾಗಿ ನೋಡು'' ಎನ್ನುತ್ತಿದ್ದರು. ಆ ಚಿತ್ರ ನಮ್ಮ ಠಾಕೂರರ (ಶ್ರೀರಾಮಕೃಷ್ಣರ) ಚಿತ್ರವಾಗಿತ್ತು. ಮೊದಮೊದಲು ನಾನು ಹೇಳುತ್ತಿದ್ದೆ, ''ಅವರು ನಮ್ಮ ಠಾಕೂರರಲ್ಲವೆ? ಅವರು ದೇವತಾಮೂರ್ತಿ ಠಾಕೂರ್ ಆದದ್ದು ಯಾವಾಗ?'' ಅಂತ. ಆಗ ಶ್ರೀಮಾತೆ ನಗುತ್ತ, ''ಅದನ್ನು ನೀನು ಈಗ ತಿಳಿದುಕೊಳ್ಳುವ ಅಗತ್ಯವಿಲ್ಲ. ನೀನು ದೊಡ್ಡವಳಾದಾಗ ನಿನಗದು ಅರ್ಥವಾಗುವುದು. ಈಗ ನೀನು ಏನನ್ನು ನೋಡುತ್ತಿದ್ದೀಯೋ ಅದೇರೀತಿ ನೋಡು; ನಾನು ಏನು ಹೇಳುತ್ತೇನೋ ಅದೇರೀತಿ ಮಾಡು. ಬೆಳಗ್ಗೆ ಸಂಜೆ ಎರಡು ಹೊತ್ತು ಎರಡು ಬಾರಿ ಪ್ರಣಾಮ ಮಾಡು, ತಿಳಿಯಿತೆ? ಬೆಳಿಗ್ಗೆ ಎದ್ದ ನಂತರ ಅವರ ಕೋಣೆಗೆ ಹೋಗಿ, ಅವರ ಪಾದ ಮುಟ್ಟಿ ನಮಸ್ಕಾರ ಮಾಡು'' ಎಂದರು.

* * *

ಶ್ರೀರಾಮಕೃಷ್ಣರು ರಾತ್ರಿ ಎಷ್ಟು ಹೊತ್ತು ನಿದ್ರೆ ಮಾಡುತ್ತಿದ್ದರೋ ಅವರಿಗೇ ಗೊತ್ತು. ಉಳಿದವರು ತುಸು ನಿದ್ರೆ ಮಾಡುತ್ತಿದ್ದರೆ ಅದನ್ನು ಅವರು ಸಹಿಸುತ್ತಿರಲಿಲ್ಲ. ತೆಳ್ಳನೆಯ ಚಪ್ಪಲಿ ಧರಿಸಿ ಚಟಪಟ ಸದ್ದುಮಾಡುತ್ತ ನಹಬತ್‌ಗೆ ಬಂದು ಬಿದಿರ ಪಟ್ಟಿಯ ಹಿಂದೆ ನಿಂತು, ''ಓ ಲಕ್ಷ್ಮಿ, ಓ ಭವತಾರಿಣಿ, ಎದ್ದೇಳಿ. ಎಷ್ಟು ಹೊತ್ತು ನಿದ್ದೆ ಮಾಡುತ್ತೀರಿ?'' ಎಂದು ಕರೆಯುತ್ತಿದ್ದರು. ಅವರು ನಮ್ಮ ಹೆಸರನ್ನೇನೋ ಕರೆಯುತ್ತಿದ್ದರು. ಆದರೆ ಅದು ನಿಜವಾಗಿ ಶ್ರೀಮಾತೆಯವರನ್ನು ಕುರಿತಾಗಿತ್ತು. ಶ್ರೀಮಾತೆಯವರು ಅದಕ್ಕೂ ಮೊದಲೇ ಎದ್ದು ಜಪಮಾಡಲು ಕುಳಿತಿರುತ್ತಿದ್ದರು; ಅವರು ಗಂಟಲು ಸರಿ ಮಾಡಿಕೊಂಡು, ''ಎದ್ದುಬಿಟ್ಟಿದ್ದೇನೆ. ನೀವು ಚಿಂತೆ ಮಾಡಬೇಡಿ'' ಎನ್ನುತ್ತಿದ್ದರು.

ಶ್ರೀರಾಮಕೃಷ್ಣರು ಪಂಚವಟಿಯತ್ತ ಹೋಗುತ್ತಿದ್ದರು. ಆಗ ಶ್ರೀಮಾತೆ ನನಗೆ, ''ನೀನು ಈಗ ಏಳಬೇಕಾಗಿಲ್ಲ. ಮಲಗಿಬಿಡು'' ಎನ್ನುತ್ತಿದ್ದರು. ನಾನು ಹೊರಳಿ ಮಲಗಿ ನಿದ್ದೆಮಾಡುತ್ತಿದ್ದೆ. ಕೆಲವೊಂದು ದಿನಗಳಲ್ಲಿ ನನಗೆ ನಿದ್ದೆ ಬರದಿದ್ದಾಗ ನಾನು ನೋಡುತ್ತಿದ್ದೆ, ಶ್ರೀಮಾತೆ ಕತ್ತಲಲ್ಲಿ ಒಬ್ಬಂಟಿಯಾಗಿ ಬಕುಲತಲಾ ಸ್ನಾನಘಟ್ಟದ ಕಡೆಗೆ ಹೋಗುತ್ತಿದ್ದರು. ಸ್ವಲ್ಪ ಹೊತ್ತಿನ ನಂತರ ಮರಳಿ ಬಂದು ಬಟ್ಟೆಬರೆ ಒಣಗಿಸಲು ಹಾಕಿ, ಪಕ್ಕದಲ್ಲಿದ್ದ ಠಾಕೂರರ ಆಸನದಿಂದ ಅವರನ್ನು ಎಬ್ಬಿಸಿ (ಅಂದರೆ ಚಿತ್ರಪಟವನ್ನು ಕೈಗೆತ್ತಿಕೊಂಡು) ಮುಖ ಒರೆಸಿ ಅಲ್ಲೇ ಕುಳ್ಳಿರಿಸುತ್ತಿದ್ದರು. ಚಿತ್ರದ ಬಳಿ ಸುಮ್ಮನೆ ಕುಳಿತುಕೊಂಡು ತಲ್ಲೀನರಾಗಿಬಿಡುತ್ತಿದ್ದರು. ಅಲ್ಲಿ ಬೇರೆ ಯಾರೋ ಕುಳಿತಿರುವಂತೆ ನನಗೆ ಭಾಸವಾಗುತ್ತಿತ್ತು. ಲಕ್ಷ್ಮೀದೀದಿ ಅಥವಾ ಬೇರೆ ಯಾರಾದರೂ ಭಕ್ತೆಯರು ಇರುತ್ತಿದ್ದರೆ ಶ್ರೀಮಾತೆ ಬೆಳಿಗ್ಗೆ ಬೇಗನೆ ಎದ್ದು ನಮ್ಮನ್ನು ಎಬ್ಬಿಸಿಬಿಡುತ್ತಿದ್ದರು. ''ಈಗ ಎದ್ದೇಳು, ಹಂಸಪುಕುರಕ್ಕೆ ಹೋಗಿ ಕೈಕಾಲು ಮುಖ ತೊಳೆದು ಬಾ '' ಎನ್ನುತ್ತಿದ್ದರು. ಅಷ್ಟರಲ್ಲಿ ಶ್ರೀಮಾತೆ ಶ್ರೀರಾಮಕೃಷ್ಣರ ಕೋಣೆಗೆ ಹೋಗಿ ಅವರ ಹಾಸಿಗೆ ಇತ್ಯಾದಿ ಮಡಚಿ ಇಟ್ಟು ಬಿಡುತ್ತಿದ್ದರು. ಒಂದೊಂದು ಸಲ ಶ್ರೀರಾಮಕೃಷ್ಣರು ಭವತಾರಿಣೀ ಮಂದಿರದಲ್ಲಿ ಇರುತ್ತಿದ್ದರು.

ಶ್ರೀಮಾತೆ ಪ್ರತಿಯೊಂದು ಕೆಲಸವನ್ನೂ ವೇಗವಾಗಿ ಮಾಡುತ್ತಿದ್ದರು. ಆದರೆ ಕೆಲಸ ಅಷ್ಟೇ ಪರಿಪೂರ್ಣತೆಯಿಂದ ಕೂಡಿರುತ್ತಿತ್ತು. ಹೇಗೆಹೇಗೋ ಅಡ್ಡಾದಿಡ್ಡಿ ಕೆಲಸ ಮಾಡುವುದು ಅವರಿಗೆ ಇಷ್ಟವಾಗುತ್ತಿರಲಿಲ್ಲ. ಮೊದಮೊದಲು ನಾನು

---

* ಬಂಗಾಳದಲ್ಲಿ ಪೂಜೆ ಮಾಡುವಾಗ ಹೂ, ಗಂಧ ಇತ್ಯಾದಿಗಳನ್ನೆಲ್ಲ ಒಂದು ದೊಡ್ಡ ತಟ್ಟೆಯಲ್ಲಿ ಅಂದವಾಗಿ ಜೋಡಿಸಿಟ್ಟಿರುತ್ತಾರೆ. ಅದಕ್ಕೆ 'ಪಂಚಪಾತ್ರೆ' ಎನ್ನುತ್ತಾರೆ.

ತುಂಬಾ ಅಡ್ಡಾದಿಡ್ಡಿ ಕೆಲಸ ಮಾಡುತ್ತಿದ್ದೆ. ಆಗ ಶ್ರೀಮಾತೆ ನನ್ನ ಕೈಹಿಡಿದು ಕಲಿಸುತ್ತಿದ್ದರು. ಅಲ್ಲೇ ನಿಂತು ನೋಡುತ್ತಾ ನಾನು ಕೆಲಸ ಮಾಡುವಂತೆ ಹೇಳುತ್ತಿದ್ದರು. ಅವರೇ ಹೇಳುತ್ತಿದ್ದರು, ''ನೋಡು ಭವಿ, ನೀನು ಬೇರೆ ಏನು ಪೂಜೆ ಮಾಡುತ್ತೀಯ? ಎಲ್ಲಾ ಕೆಲಸವೂ ಪೂಜೆಯೇ. ನೀನು ಈ ಕ್ಷಣದಿಂದಲೇ ಇದನ್ನು ಮನಸ್ಸಿನಲ್ಲಿಟ್ಟುಕೋ. ಹೆಣ್ಣುಮಕ್ಕಳಿಗೆ ಈ ಕೆಲಸಗಳೇ ಪೂಜೆ, ತಿಳಿಯಿತೆ?'' ಎನ್ನುತ್ತಿದ್ದರು.

ಯಾವುದೇ ಕೆಲಸವಾಗಿರಲಿ, ಅದನ್ನು ಮಾಡುವ ಮೊದಲು ಕೈಗೆ ಗಂಗಾಜಲ ಚಿಮುಕಿಸಿಕೊಳ್ಳಲು ಹೇಳುತ್ತಿದ್ದರು. ಸ್ವತಃ ತಾವೂ ಹಾಗೆ ಮಾಡುತ್ತಿದ್ದರು. ಜೊತೆಗೆ ನಮ್ಮ ತಲೆಯ ಮೇಲೆ ಕೂಡ ಚಿಮುಕಿಸುತ್ತಿದ್ದರು. ಗಂಗಾಜಲವನ್ನು ಅವರು 'ಬ್ರಹ್ಮವಾರಿ' ಎನ್ನುತ್ತಿದ್ದರು. ಅದು ನಮಗೆ ಬಾಯಿಪಾಠವಾಗಿ ಹೋಗಿತ್ತು. ಆಗಿನಿಂದ ಇಂದಿನತನಕವೂ ಹಾಗೆ – ಏನಾದರೂ ಕೆಲಸ ಮಾಡಬೇಕೆನಿಸಿದರೂ 'ಬ್ರಹ್ಮವಾರಿ' ಬೇಕಾಗುವುದು. ಶ್ರೀಮಾತೆಗೆ ಆಚಾರ ವಿಚಾರಗಳಲ್ಲಿ ಅಂತಹ ವ್ಯಸನವೇನೂ ಇರಲಿಲ್ಲ. ನಮಗೆ ಆಗಾಗ ಬಟ್ಟೆ ಬರೆ ಬದಲಾಯಿಸುವುದಕ್ಕೂ ಅವರು ಹೇಳುತ್ತಿರಲಿಲ್ಲ. ನಾವಂತೂ ಎಳೆಯ ವಯಸ್ಸಿನಿಂದಲೇ ಸೀರೆ ಉಡುತ್ತಿದ್ದೆವು. ನನಗೆ ಶ್ರೀಮಾತೆಯವರೇ ತಲೆ ಬಾಚಿ ಕೊಡುತ್ತಿದ್ದರು. ಎರಡು ಹೊತ್ತೂ ಅವರು ಶ್ರೀರಾಮಕೃಷ್ಣರ ಬಳಿಗೆ ಏನಾದರೂ ಕೆಲಸಕ್ಕಾಗಿ ಕಳುಹಿಸುತ್ತಿದ್ದರು.

* * *

ಪೀತಾಂಬರ ಭಂಡಾರಿಯ ಮಗಳು ಮತ್ತು ದಕ್ಷಿಣೇಶ್ವರ ಗ್ರಾಮದ ನನ್ನದೇ ಪ್ರಾಯದ ಮೂವರು ಜೊತೆಗಾತಿಯರು ಪ್ರತಿದಿನ ಅಲ್ಲಿಗೆ ಬರುತ್ತಿದ್ದರು. ಶ್ರೀಮಾತೆ ಮತ್ತು ಶ್ರೀರಾಮಕೃಷ್ಣರು ಅವರನ್ನೂ ತುಂಬ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಅವರೊಂದಿಗೆ ನಾನು ಎಷ್ಟೊಂದು ಆಟವಾಡುತ್ತಿದ್ದೆ – ಓಡಾಡುವುದು, ಮರದ ರೆಂಬೆರೆಂಬೆಗಳಲ್ಲಿ ಕಣ್ಣಮುಚ್ಚಾಲೆ ಆಟ, ಹಂಸಪುಕುರದಲ್ಲಿ ಈಜಾಡುವುದು – ಹೀಗೆ ಏನೇನೋ! ಅದರ ನಡುವೆ ನಾನು ಶ್ರೀಮಾತೆಯವರ ಒಳಗೆ ಓಡಿ ಬಂದು, ಅವರನ್ನು ನೋಡಿಕೊಂಡು ಹೋಗುತ್ತಿದ್ದೆ. ಒಂದು ದಿನ ಸ್ವಾರಸ್ಯಕರವಾದ ಸಂಗತಿ ನಡೆಯಿತು. ಝೂಮಾಪುಕುರದ ಮನೆಯಿಂದ ಕೆಲವು ಮಂದಿ ಬಂದರು. ಅವರು ಜಯರಾಮಬಾಟಿಯಿಂದ ಗಂಗಾಸ್ನಾನ ಮಾಡಲು ಕಲ್ಕತ್ತೆಗೆ ಬಂದಿದ್ದರು. ಅದರೊಂದಿಗೆ ಅವರು ದಕ್ಷಿಣೇಶ್ವರದಲ್ಲಿರುವ ಅವರ ಶಾರು (ಶ್ರೀಮಾತೆ ಶಾರದಾದೇವಿ) ಹಾಗೂ ಹುಚ್ಚು ಅಳಿಯ (ಶ್ರೀರಾಮಕೃಷ್ಣರು)ನನ್ನು ನೋಡಲು ಬಂದಿದ್ದರು. ಶಾರು ತನ್ನ ಸಂಸಾರವನ್ನು ಹೇಗೆ ನಡೆಸುತ್ತಿದ್ದಾಳೆ ಎಂಬುದನ್ನೂ ಅವರು ನೋಡಬೇಕೆಂದಿದ್ದರು. ಅವರು ಸುಮಾರು ಆರು ಮಂದಿ ಇದ್ದರು. ಅವರು ನೇರ ಶ್ರೀರಾಮಕೃಷ್ಣರ ಕೋಣೆಗೆ, ಅವರನ್ನು ಕಂಡು ಅಲ್ಲಿಂದ ನಹಬತ್‌ಗೆ ಬಂದಿದ್ದರು. ಏನೇನೋ ಮಾತುಕತೆ ನಡೆದವು. ಹಳೆಯ ಗ್ರಾಮೀಣ ಮಾತುಕತೆಗಳು. ನಾನು ಅಲ್ಲೇ ಒಂದೆಡೆ ನಿಂತು ಎಲ್ಲವನ್ನೂ ಕೇಳಿಸಿಕೊಳ್ಳುತ್ತಿದ್ದೆ. ಅವರ ನಡುವೆ ಒಬ್ಬಾಕೆ ಶ್ರೀಮಾತೆಯವರ ವಯಸ್ಸಿನವಳು ಹೇಳತೊಡಗಿದಳು, ''ಏನಮ್ಮಾ ಚೆಂಡುಹೂವೆ*, ನನ್ನ ನೆನಪಿದೆಯೇನೆ? ಅಥವಾ ಭೋಲಾನಾಥನನ್ನು ('ಮರೆತುಬಿಡುವವನು' – ಶಿವ) ಗಂಡನನ್ನಾಗಿ ಪಡೆದು ಈ 'ದಾಸವಾಳ'ವನ್ನು ಮರೆತುಬಿಟ್ಟೆಯಾ?'' ಹೀಗೆನ್ನುತ್ತ ಆಕೆ ಶ್ರೀಮಾತೆಯವರ ಗಲ್ಲವನ್ನು ತಟ್ಟಿ ಕಿಲಕಿಲನೆ ನಗತೊಡಗಿದಳು. ಆಗ ಪಕ್ಕದಲ್ಲಿದ್ದ ಇನ್ನೊಬ್ಬಾಕೆ ಕೇಳಿದಳು, ''ಅದೇನಮ್ಮಾ? ಏನಂತ ಬಿಡಿಸಿ ಹೇಳು, ನನಗೂ ಗೊತ್ತಾಗಲಿ.'' ಶ್ರೀಮಾತೆ ನಾಚಿಕೆ ಸ್ವಭಾವದವರು, ಸುಮ್ಮನೆ ನಸುನಗೆ ಬೀರಿದರು. ಆಗ ಇನ್ನೊಬ್ಬಾಕೆ ಹೇಳಿದಳು, ''ಮಳೆಗಾಲದ ಒಂದುದಿನ ನಾವು ಬಾಂಡೂಜಿಪುಕುರಕ್ಕೆ ಸ್ನಾನ ಮಾಡಲು ಹೋಗಿ, ಕಾಲು ಜಾರಿತು; ಆದರೆ ನಾವಿಬ್ಬರೂ ಮುಳುಗದಂತೆ ಒಬ್ಬರನ್ನೊಬ್ಬರು ಹಿಡಿದುಕೊಂಡಿದ್ದೆವು. ಪಕ್ಕದಲ್ಲಿದ್ದ ವೃದ್ಧ ಹೆಂಗಸು ನಮ್ಮನ್ನು ಮೇಲಕ್ಕೆ ಎಳೆದುಹಾಕಿ ರಕ್ಷಿಸಿದಳು. ನಾವು ಇನ್ನೂ ಒಬ್ಬರನ್ನೊಬ್ಬರು ಹಿಡಿದುಕೊಂಡಿದ್ದೆವು. ಅದನ್ನು ನೋಡಿದ ವೃದ್ಧ ಹೆಂಗಸು, 'ನೀವಿಬ್ಬರೂ ಗೆಳತಿಯರಲ್ಲವೇ? ನಿಮಗೆ ನಾನು ಬೇರೆ ಹೆಸರು ಕೊಡುತ್ತೇನೆ : 'ಚೆಂಡು ಹೂ' ಮತ್ತೆ 'ದಾಸವಾಳ' ತಿಳಿಯಿತೆ?' ಎಂದಳು. ನಮಗೆ ಭಾರೀ ಆನಂದ. ಅಂದಿನಿಂದ ಶಾರು ಹೆಸರು 'ಚೆಂಡು ಹೂ' ಅಂತ, ನನ್ನ ಹೆಸರು 'ದಾಸವಾಳ' ಅಂತ.''



ನಹಬತ್, ದಕ್ಷಿಣೇಶ್ವರ

*ಬಂಗಾಳಿಯಲ್ಲಿ 'ಗಾಂದಾ ಫೂಲ್' (ಚೆಂಡು ಹೂ) ಎಂದು. ದಾಸವಾಳಕ್ಕೆ 'ಜವಾ' ಎನ್ನುತ್ತಾರೆ.

ಪ್ರತಿದಿನವೂ ಸಾಯಂಕಾಲದ ಹೊತ್ತು ನನಗೆ ಕೆಲವು ಕೆಲಸಗಳನ್ನು ಮಾಡಬೇಕಾಗುತ್ತಿತ್ತು. ನನ್ನನ್ನು ಠಾಕೂರರೇ ತಮ್ಮೊಂದಿಗೆ ಕರೆದುಕೊಂಡುಹೋಗಿ ಅದನ್ನು ಕಲಿಸಿಕೊಟ್ಟಿದ್ದರು. ಗಾಜಿಪೀರರ ದೇಗುಲದಲ್ಲಿ ಸಾಯಂಕಾಲ ದೀಪ ಹಚ್ಚಿ ಇಡುವುದು, ಅನಂತರ ನಹಬತ್‌ನಲ್ಲಿ ಶ್ರೀಮಾತೆಯವರು ಪೂಜೆಮಾಡುತ್ತಿದ್ದ ಸ್ಥಳದಲ್ಲಿ ಧೂಪ ಹಾಕಿ ಇಡುವುದು ಇತ್ಯಾದಿ. ಅಲ್ಲಿ ಶ್ರೀಮಾತೆ ತಪ್ಪದೆ ದಿನವೂ ಧ್ಯಾನ ಮಾಡಲು ಕುಳಿತು ಕೊಳ್ಳುತ್ತಿದ್ದರು. ಸಾಯಂಕಾಲ ನಹಬತ್‌ನಲ್ಲಿ ಯಾರಾದರೂ ತಂಗುವುದಿದ್ದರೆ, ಅವರೂ ಶ್ರೀಮಾತೆಯವರ ಸುತ್ತ ಕುಳಿತು ಕೊಳ್ಳುತ್ತಿದ್ದರು. ನಾನು ಶ್ರೀಮಾತೆಯವರ ಸಮೀಪದಲ್ಲಿ ಅವರ ಮೈಗೆ ತಗಲುವಂತೆ ಕುಳಿತುಕೊಳ್ಳುತ್ತಿದ್ದೆ. ಶ್ರೀರಾಮಕೃಷ್ಣರ ಕಡೆಗೆ (ಚಿತ್ರಪಟ) ನೋಡುವುದಕ್ಕಿಂತ ಹೆಚ್ಚಾಗಿ ನಾನು ಶ್ರೀಮಾತೆ ಯವರ ಕಡೆಗೇ ನೋಡುತ್ತಿದ್ದೆ. ಶ್ರೀಮಾತೆಯವರು ಆಗ ಅದ್ಭುತ ಮೂರ್ತಿಯಾಗಿ ಕಂಡುಬರುತ್ತಿದ್ದರು. ಅತ್ತ ವಿವಿಧ ದೇಗುಲ ಗಳಲ್ಲಿ ಆರತಿ ನಡೆಯುತ್ತಿತ್ತು. ಶ್ರೀರಾಮಕೃಷ್ಣರ ಕೋಣೆಯಲ್ಲಿ ಹರಿನಾಮ ಸಂಕೀರ್ತನೆ, ಗಂಗಾನದಿಯ ವಕ್ಷಸ್ಥಳದಲ್ಲಿ ದೀಪ ಮಾಲೆಯ ಬೆಳಕಿನ ಪ್ರತಿಫಲನ – ಒಟ್ಟಿನಲ್ಲಿ ಒಂದು ದಿವ್ಯ ಸನ್ನಿವೇಶವದು. ಆಗ ಯಾರೂ ಸಾಧಾರಣ ಮನುಷ್ಯನಾಗಿ ಉಳಿಯಲಾರ , ಎಲ್ಲವೂ ಮರೆತುಹೋಗುವುದು. ಇದು ನಮ್ಮ ದೈನಂದಿನ ಜೀವನದ ಅವಿಭಾಜ್ಯ ಅಂಗವಾಗಿತ್ತು; ಇದನ್ನು ಮರೆಯಲಾಗದು. ಬಾಲ್ಯದ ಎಳೆಯ ಮನಸ್ಸಿನ ಅನೇಕ ಸಂಗತಿ ಗಳು ವಿಸ್ಮೃತಿಯ ಗುಹೆಯಲ್ಲಿ ಮುಳುಗಿಹೋಗಿವೆ; ಆದರೆ ಆ ಛಂದೋಬದ್ಧವಾದ, ಸಂಧ್ಯಾಕಾಲದ ಆವೇಶಭರಿತವಾದ ಛಾಯೆ ಮಾತ್ರ ಇಂದಿಗೂ ಅಷ್ಟೊಂದು ಅಳಿಸಿಹೋಗಿಲ್ಲ.

ಶ್ರೀರಾಮಕೃಷ್ಣರು ಹೇಳುತ್ತಿದ್ದರು, ''ಬೆಳಿಗ್ಗೆ –ಸಾಯಂಕಾಲ ಬೇರೆಲ್ಲ ಕೆಲಸಗಳನ್ನೂ ಬಿಟ್ಟು ಭಗವಂತನ ನಾಮಜಪ ಮಾಡು'' ಅಂತ. ಸ್ವತಃ ತಾವೇ ಚಪ್ಪಾಳೆ ತಟ್ಟುತ್ತ ನಾಮಜಪ ಮಾಡಿಸು ತ್ತಿದ್ದರು. ''ದನಿಯೆತ್ತಿ ಜಪಿಸು. ಒಳಗಿನ ಕೆಡುಕೆಲ್ಲ ಹೊರಗೆ ಬಂದುಬಿಡುವುದು. ದೇಹ, ಮನಸ್ಸು ಪವಿತ್ರವಾಗುವುದು'' ಎನ್ನುತ್ತಿದ್ದರು. ಇಂದು ಅವರು ಹಾಗೆ ಮಾಡಲು ನನ್ನ ಬಳಿ ಇಲ್ಲ ; ಆದರೆ ಇಂದೂ ಸಾಯಂಕಾಲವಾದರೆ ಯಾರೋ ನನ್ನ ಸ್ವರದೊಂದಿಗೆ ಸ್ವರ ಸೇರಿಸುತ್ತ ಹರಿನಾಮ ಹಾಗೂ ರಾಮನಾಮ ಜಪಿಸುತ್ತಿರುವುದನ್ನು ನಾನು ಕೇಳುತ್ತೇನೆ. ಇದು ಅವರದೇ ಸ್ವರ– ಕೊಳಲಿನ ಸ್ವರದಂತೆ ಶ್ರುತಿಬದ್ಧವಾದ ಸ್ವರ.

ಸಾಯಂಕಾಲದ ಕಾರ್ಯಕಲಾಪಗಳೆಲ್ಲವೂ ಮುಗಿದ ನಂತರ ನಾನು ಶ್ರೀರಾಮಕೃಷ್ಣರ ಕೋಣೆಗೆ ಹೋಗುತ್ತಿದ್ದೆ. ಆಗ ಅವರು ಬಹುತೇಕ ಒಬ್ಬಂಟಿಯಾಗಿ ಕುಳಿತು ಏನೋ ಆಲೋಚನೆಯಲ್ಲಿ ಮುಳುಗಿರುತ್ತಿದ್ದರು. ಹೆಚ್ಚು ಮಾತನಾಡುತ್ತಿರಲಿಲ್ಲ. ಇದನ್ನು ಮಾತ್ರ ಹೇಳುತ್ತಿದ್ದರು : ''ನೋಡು, ಅಲ್ಲಿ ಆ ನೀರಿಡುವ ಪೀಠದ ಮೇಲೆ ಪ್ರಸಾದವಿದೆ. ಅದನ್ನು ನಹಬತ್‌ಗೆ ತೆಗೆದುಕೊಂಡು ಹೋಗು. ನಿನ್ನ ಪಾಲಿನದೂ ಅಲ್ಲಿದೆ. ಅದನ್ನು ತಿನ್ನು, ಬಾ.'' ಪ್ರಸಾದದ ತಟ್ಟೆಯನ್ನು ನಾನು ನಹಬತ್‌ಗೆ ತೆಗೆದುಕೊಂಡು ಹೋಗಿ ಶ್ರೀಮಾತೆಯವರಿಗೆ ಕೊಟ್ಟು, ನನ್ನ ಪಾಲಿನದನ್ನು ತಿಂದು, ಶ್ರೀರಾಮಕೃಷ್ಣರ ಸಣ್ಣ ಮಂಚದ ಮೇಲೆ ಮಲಗಿ ನಿದ್ದೆ ಮಾಡುತ್ತಿದ್ದೆ. ಹಲವಾರು ದಿನ ರಾತ್ರಿಹೊತ್ತು ಶ್ರೀಮಾತೆ ನನ್ನನ್ನು ನಹಬತ್‌ಗೆ ಕರೆದುಕೊಂಡು ಹೋಗುತ್ತಿದ್ದರು. ಆಗ ನನಗೆ ನಿದ್ದೆ ಕೆಡುತ್ತಿತ್ತು. ಶ್ರೀಮಾತೆ, ನಾನು ಹಾಗೂ ಬೇರೆ ಯಾರಾದರೂ ಅಲ್ಲಿದ್ದರೆ ಅವರು – ರಾತ್ರಿಯ ಊಟ ಮಾಡುತ್ತಿದ್ದೆವು. ಅನಂತರ ನಾನು ಶ್ರೀಮಾತೆಯವರ ಮಡಿಲ ಬಳಿ ಮಲಗಿ ಕಥೆ ಹೇಳಲು ಒತ್ತಾಯಿಸುತ್ತಿದ್ದೆ. ಶ್ರೀಮಾತೆ ಕೇಳುತ್ತಿದ್ದರು, ''ಇವತ್ತು ಅವರು (ಶ್ರೀರಾಮಕೃಷ್ಣರು) ಏನು ಹೇಳಿದ್ದಾರೆ ನೆನಪಿದೆಯೆ? ಹೇಳು ನೋಡೋಣ, ನಾನು ಕೇಳುತ್ತೇನೆ'' ಅದನ್ನೆಲ್ಲ ಅವರು ಆಲಿಸುತ್ತಿದ್ದರು. ಅವರೂ ಅನೇಕ ಸಂಗತಿಗಳನ್ನು ಹೇಳುತ್ತಿದ್ದರು.

ಒಂದು ದಿನ ಮಾತುಕತೆ ನಡುವೆ ನಾನು ಶ್ರೀಮಾತೆಗೆ ಹೇಳಿದೆ: ''ನಿಮ್ಮ ಹೆಸರು ಚೆಂಡುಹೂ, ನಿಮ್ಮ ಗೆಳತಿಯ ಹೆಸರು ದಾಸವಾಳ, ಅಲ್ಲವೆ? ಅಂದು ಜಯರಾಮಬಾಟಿಯಿಂದ ಬಂದಿದ್ದವರೂ ಹಾಗೆಂದರು. ನಾನು ನಿಮ್ಮನ್ನು 'ಚೆಂಡುಹೂ ಅಕ್ಕ' (ಗಾಂದಾಫೂಲ್ ದೀದಿ) ಅಂತ ಕರೆದರೆ ಹೇಗೆ?'' ಅದಕ್ಕೆ ಅವರು, ''ಯಾಕಮ್ಮಾ, 'ಅಮ್ಮ' ಅಂತ ಕರೆದರೆ ಚೆನ್ನಾಗಿರಲ್ವಾ?'' ಎಂದರು. ''ಹಾಗೇನೂ ಇಲ್ಲ; ಆದರೂ ನಾನು 'ಚೆಂಡುಹೂ ಅಕ್ಕ' ಎಂದೇ ಕರೆಯುತ್ತೇನೆ ಎಂದೆ. ಅದಕ್ಕೆ ಶ್ರೀಮಾತೆ ಬೇಡವೆನ್ನಲಿಲ್ಲ. ಅಂದರೆ ಅದಕ್ಕೆ ಅವರ ವಿರೋಧವಿರಲಿಲ್ಲ ಎಂದು ನನಗನ್ನಿಸಿತು. ಅನಂತರ ನಾನು ಶ್ರೀಮಾತೆಯವರನ್ನು 'ಚೆಂಡುಹೂ ಅಕ್ಕ' ಎಂದೇ ಕರೆಯುತ್ತಿದ್ದೆ. ಅವರೂ ಅದಕ್ಕೆ ಹೂಂಗುಡುತ್ತಿದ್ದರು.

ಶ್ರೀಮಾತೆ ಮಾತುಕತೆಗಳಲ್ಲಿ ಹೆಚ್ಚು ಕಾಲ ಕಳೆಯುತ್ತಿರಲಿಲ್ಲ. ನಾನು ಒಂದು ಸಂಗತಿಯನ್ನು ಚೆನ್ನಾಗಿ ಗಮನಿಸಿದ್ದೆ. ಶ್ರೀಮಾತೆ ಯಾವುದೇ ವೇಳೆ ಯಾವ ಕೆಲಸವನ್ನೇ ಮಾಡಲಿ, ಅವರ ತುಟಿಗಳು ಅಲುಗಾಡುತ್ತಿದ್ದವು. ಒಂದು ದಿನ ತುಂಬ ಸ್ವಾರಸ್ಯಕರವಾದ ಸಂಗತಿ ನಡೆಯಿತು. ಶ್ರೀಮಾತೆ ನನಗೆ ಹೇಳಿದರು, ''ನೋಡು ಭವಿ, ನಾನು ಸ್ವಲ್ಪಹೊತ್ತು ಠಾಕೂರರ ಕೋಣೆಗೆ ಕುಡಿಯುವ ನೀರು ತೆಗೆದುಕೊಂಡು ಹೋಗುತ್ತೇನೆ.'' ನಾನೆಂದೆ, ''ನನಗೆ ಅದನ್ನು ಕೊಡಿ. ನಾನು ಅದನ್ನು ಅಲ್ಲಿ ಇಟ್ಟು ಬರುತ್ತೇನೆ.'' ಶ್ರೀಮಾತೆ ನನಗೆ ಕೊಡಲಿಲ್ಲ. ''ನೀನು ಸ್ವಲ್ಪ ಒಲೆಯ ಹತ್ತಿರ ಕುಳಿತುಕೋ. ದಾಲ್ ಕುದಿದ ಮೇಲೆ ಉಕ್ಕಿ ಬರದಂತೆ ನೋಡಿಕೋ. ಉಕ್ಕಿ ಬಂದರೆ ಸ್ವಲ್ಪ ನೀರು ಹಾಕು, ತಿಳಿಯಿತೆ?'' ಎಂದರು. ಹೀಗೆಂದ ಅವರು ಹೊರಟುಹೋಗುತ್ತಲೇ, ಈಗ ಠಾಕೂರರ ಕೋಣೆಯಲ್ಲಿ ಯಾರೂ ಇಲ್ಲ; ಬೇಗನೆ ಇದನ್ನು ಕೊಟ್ಟು ಬಂದುಬಿಡುತ್ತೇನೆ ಎಂದರು ಶ್ರೀಮಾತೆ ಹೊರಟು

ಹೋದರು, ದಾಲ್ ಕೂಡ ಕುದಿಯತೊಡಗಿತು. ನಾನು ಒಂದೇ ದೃಷ್ಟಿಯಿಂದ ನೋಡುತ್ತಿದ್ದೆ , ಅದು ಕುದಿಯುವಾಗ ನೀರು ಎರೆದುಬಿಡುತ್ತೇನೆ ಎಂಬುದಾಗಿ. ಬಾಯಲ್ಲಿ ಏನೋ ಗೊಣಗುಟ್ಟುತ್ತ – ಶ್ರೀಮಾತೆ ಅಡುಗೆ ಮಾಡುತ್ತಿದ್ದಾಗ ಹಾಗೆ ಮಾಡುತ್ತಿದ್ದುದನ್ನು ನೋಡಿದ್ದೆನಲ್ಲ! ಆದರೆ ನನ್ನ ನಾಲಿಗೆ ಮಾತ್ರ ಉಚ್ಚರಿಸುತಿತ್ತು. ದಾಲ್‌ನ ನೀರು ಮೇಲಕ್ಕೆ ಬರತೊಡಗಿತ್ತು, ನಾನು ಎಡಗೈಯಲ್ಲಿ ನೀರಿನ ಪಾತ್ರೆಯನ್ನು ಹಿಡಿದು ನೀರೆರೆಯಲು ಹೊರಟಿದ್ದೆ. ಅಷ್ಟರಲ್ಲಿ ಶ್ರೀಮಾತೆ ಹಿಂದಿರುಗಿ ಬಂದರು. ಅವರು ಹೇಳಿದರು, ''ಭವಿ, ಈ ಕಡೆ ಬಾ. ಬಾಯಲ್ಲಿ ಏನು ಗೊಣಗುಟ್ಟುತ್ತಿದ್ದೀಯಾ?'' ''ಏನೂ ಇಲ್ಲ, ನೀವು ಅಡುಗೆ ಮಾಡುವಾಗ ಹೀಗೆ ಮಾಡುತ್ತಿದ್ದುದ್ದನ್ನು ನೋಡಿದ್ದೇನೆ. ನಾನೂ ಹಾಗೆ ಮಾಡುತ್ತಿದ್ದೆ'' ಎಂದೆ ನಾನು. ಶ್ರೀಮಾತೆ ನಗುತ್ತ, ''ಅಯ್ಯೋ ಹುಚ್ಚಿ, ಚೋಟುದ್ದದ ಹುಡುಗಿ ನೀನು; ಅಡುಗೆ ಮಾಡುವಾಗ ನಾನೇನು ಮಾಡುತ್ತಿದ್ದೆ ಅಂತ ನೊಡಿದ್ದೀಯಾ? ನಾನು ಏನೋ ಗೊಣಗುಟ್ಟುತ್ತಿಲ್ಲ, ನಾನು ಠಾಕೂರರ ನಾಮಜಪ ಮಾಡುತ್ತೇನೆ. ಅದಕ್ಕೆ 'ಜಪ' ಅಂತ ಹೇಳುತ್ತಾರೆ. ಕೆಲಸದ ನಡುವೆ ಭಗವಂತನ ಹೆಸರು ಹೇಳಿ ಜಪಮಾಡಬೇಕು. ಆಗಲೇ ಕೆಲಸ ಚೆನ್ನಾಗಿ ಆಗುವುದು. ಈಗ ನೀನು ಹೋಗಿ ಠಾಕೂರರ ಕೋಣೆಯನ್ನು ಒರೆಸಿ ಬಾ. ಮೊದಲು ಕಸಬರಿಕೆಯಿಂದ ಗುಡಿಸಬೇಕು'' ಎಂದರು. ನಾನು ಠಾಕೂರರ ಕೋಣೆಯತ್ತ ಓಡಿದೆ. ಆದರೆ ಗುಡಿಸುವುದಕ್ಕೆ ನಾನು ಕಾಯಬೇಕಾಯಿತು. ನರೇನ್ ದಾ ('ನರೇನ್ ಅಣ್ಣ' ಎಂದರ್ಥ, ಮುಂದೆ ಸ್ವಾಮಿ ವಿವೇಕಾನಂದರು) ಬಂದುಬಿಟ್ಟಿದ್ದ, ಅವನೊಂದಿಗೆ ಇನ್ನಿಬ್ಬರೂ ಇದ್ದರು. ನನ್ನನ್ನು ನೋಡಿದ ಕೂಡಲೇ ನರೇನ್ ದಾ ಹೇಳಿದ, ''ನೋಡು ಶಾಂಕಚುನ್ನಿ('ಹೆಣ್ಣು ದೆವ್ವ' ಎಂದರ್ಥ), ನನಗೆ ಬಾಯಾರಿಕೆಯಾಗಿದೆ. ಆ ಹಂಡೆಯಿಂದ ನೀರು ತಂದುಕೊಡು'' ನಾನು ಹಾಗೆ ಮಾಡದೆ ಸುಮ್ಮನೆ ಕುಳಿತೆ. ನಾನೆಂದೆ, ''ನಾನು ಕೊಡಲ್ಲ. ನನ್ನನ್ನು ಕೆಟ್ಟ ಹೆಸರಿನಿಂದ ಏಕೆ ಕರೆಯುತ್ತೀಯಾ?''



ಶ್ರೀರಾಮಕೃಷ್ಣರ ಕೋಣೆ, ದಕ್ಷಿಣೇಶ್ವರ

ಅದಕ್ಕೆ ನರೇನ್ ದಾ ನಗುತ್ತ ನನ್ನ ಕೈ ಹಿಡಿದೆಳೆದು ಅವನ ಬಳಿಗೆ ಸೆಳೆಯುತ್ತ, ''ಓ ಶಾಂಕಚುನ್ನಿ, ನಿನ್ನ ಕೈಯಿಂದ ನನಗೆ ನೀರು, ತಂಬಾಕು ಕೊಟ್ಟರೆ ನನ್ನ ಹಾಗೆ ನೀನೂ ಚೆನ್ನಾಗಿ ಕಾಣಿಸುತ್ತೀಯಾ. ಆಗ ನಿನಗೆ ಒಳ್ಳೆಯ ಸುಂದರನಾದ ಗಂಡ ಸಿಗುತ್ತಾನೆ. ಈಗ ನೀನು ಓಡಿಹೋಗಿ ಒಂದು ಗ್ಲಾಸ್ ನೀರು ತಾ. ಆಮೇಲೆ ನನಗೆ ಹುಕ್ಕಾ ತಯಾರು ಮಾಡಿಕೊಡು'' ಎಂದ. ಠಾಕೂರ್ ಕೋಣೆಯಲ್ಲಿರಲಿಲ್ಲ ; ನನಗೆ ಅಲ್ಲಿ ಗುಡಿಸಲಾಗಲಿಲ್ಲ. ನಾನು ನೀರು ತಂದುಕೊಟ್ಟೆ. ತಂಬಾಕು ತಯಾರಿಸಿಕೊಡಲು ನನಗೆ ಬರುತ್ತಿರಲಿಲ್ಲ, ಆದರೂ ವರಾಂಡದಲ್ಲಿ ಒಂದು ಹುಕ್ಕಾ ಇತ್ತು; ಅದನ್ನು ನಹಬತ್‌ಗೆ ತೆಗೆದುಕೊಂಡು ಹೋದೆ. ನನ್ನನ್ನು ನೋಡಿದ ಶ್ರೀಮಾತೆ, ''ಗುಡಿಸಿ, ಒರೆಸಿ ಬಂದೆ ತಾನೆ?'' ಎಂದು ಕೇಳಿದರು. ''ಇಲ್ಲ, ನರೇನ್‌ದಾ ಬಂದಿದ್ದ. ಠಾಕೂರ್ ಕೋಣೆಯಲ್ಲಿರಲಿಲ್ಲ. ನನಗೆ ತಂಬಾಕು ತಯಾರಿಸಲು ನರೇನ್ ದಾ ಹೇಳಿದ್ದಾನೆ. ಅದು ನನಗೆಲ್ಲಿ ಗೊತ್ತಿದೆ?'' ಎಂದೆ. ''ಇಲ್ಲ, ನೀನು ಅದನ್ನು ಕಲಿಯಬೇಕಾದದ್ದಿಲ್ಲ. ಆ ಹುಕ್ಕಾವನ್ನು ನನಗೆ ಕೊಡು'' ಎಂದರು. ಶ್ರೀಮಾತೆ ಒಲೆಯಿಂದ ಚಿಮಿಟಿಯಲ್ಲಿ ಒಂದು ಕೆಂಡವನ್ನು ಹುಕ್ಕಾಗೆ ಹಾಕಿದರು. ಅನಂತರ ತೆಂಗಿನ ಸಿಪ್ಪೆಯನ್ನು ಅದರ ಮೇಲಿರಿಸಿ, ನನ್ನ ಕೈಗೆ ಅದನ್ನು ಕೊಟ್ಟು, ''ತೆಗೆದುಕೊಂಡು ಹೋಗು ಎಂದರು. ಅಚ್ಚುಕಟ್ಟಾಗಿ ಜೋಡಿಸಿಟ್ಟಿದ್ದ ಹುಕ್ಕಾವನ್ನೂ ನೋಡಿ ನರೇನ್ ದಾ, ''ಏನು ಮಾಡಿಬಿಟ್ಟೆ! ಇಷ್ಟೊಂದು ಚೆನ್ನಾಗಿ ಯಾರು ಜೊಡಿಸಿಕೊಟ್ಟರು?'' ಎಂದು ಕೇಳಿದ. ನಾನೆಂದೆ, ''ಯಾಕೆ? ಶ್ರೀಮಾತೆ ಜೋಡಿಸಿಕೊಟ್ಟರು!'' ನರೇನ್‌ದಾ ತಲೆಮೇಲೆ ಕೈಯಿಟ್ಟು ''ಓ ಶಾಂಕಚುನ್ನಿ, ನೀನೇನು ಮಾಡಿಬಿಟ್ಟೆ! ಸರ್ವನಾಶವಾಗಿಹೋಯಿತು! ಈಗ ನಾನು ಹುಕ್ಕಾವನ್ನು ಹೇಗೆ ಸೇದಲಿ?'' ಎಂದ. ನರೇನ್ ದಾ ತಂಬಾಕಿನ ಹುಕ್ಕಾವನ್ನು ತಲೆಗೆ ಒಂದು ಬಾರಿ ಸ್ಪರ್ಶಿಸಿ, ಎದ್ದು ನಿಂತು ತಾನೇ ಹುಕ್ಕಾವನ್ನು ಜೋಡಿಸಿ, ಅನಂತರ ಸೇದತೊಡಗಿದ.

ಹಗಲು ಹೊತ್ತು ಶ್ರೀಮಾತೆಯವರೊಂದಿಗೆ ಅಷ್ಟೇನೂ ಮಾತುಕತೆ ನಡೆಯುತ್ತಿರಲಿಲ್ಲ. ಅವರು ನನ್ನನ್ನು ಪೀತಾಂಬರ ಭಂಡಾರಿಯ ಮಗಳ ಕಡೆಗೆ ಕಳುಹಿಸುತ್ತಿದ್ದರು. ಅಲ್ಲಿ ನಾವಿಬ್ಬರು ಹಾಗೂ ಇನ್ನಿಬ್ಬರು ಹುಡುಗ, ಹುಡುಗಿಯರು ಇರುತ್ತಿದ್ದರು. ನಾವೆಲ್ಲ ಸೇರಿ ಖಚಾಂಚಿಯ ಕೋಣೆ ಪಕ್ಕದಲ್ಲಿದ್ದ ಸಣ್ಣ ಕೋಣೆಯಲ್ಲಿ ಚಾಪೆ ಹಾಸಿ ಓದುತ್ತಿದ್ದೆವು. ನಾವು ಅ,ಆ,ಕ,ಖ, ಹಾಗೂ ಗಣಿತ ಬರೆಯುತ್ತಿದ್ದೆವು. ನಾವು ಮರಳಿ ಬಂದಾಗ ನಡುವೆ ಬಿಡುವು ಮಾಡಿಕೊಂಡು ಶ್ರೀಮಾತೆ ಕೇಳುತ್ತಿದ್ದರು, ''ಇವತ್ತು ಏನು ಓದಿದೆ ಹೇಳು, ನಾನು ಕೇಳುತ್ತೇನೆ.'' ಅನಂತರ ಹೇಳುತ್ತಿದ್ದರು, ''ಎಷ್ಟು ಸಾಧ್ಯವೋ ಅಷ್ಟು ಚೆನ್ನಾಗಿ ಕಲಿ. ಹೆಣ್ಣಾಗಿ ಹುಟ್ಟಿದ್ದೀಯಾ, ಯಾವಾಗ ಮದುವೆ ಮಾಡಿ ಬಿಡುತ್ತಾರೋ ಹೇಳಲಾಗದು.''

ಈ ರೀತಿ ನಾನು ಅಲ್ಲಿಗೆ ಹೋಗದ ದಿನ ಶ್ರೀಮಾತೆ ಓದು ಬರಹದ ಬಗ್ಗೆ ಕೇಳುತ್ತಿರಲಿಲ್ಲ. ಅವರದೊಂದು ಅದ್ಭುತವಾದ ವಿಧಾನವಾಗಿತ್ತು. ಸಂಧ್ಯಾರತಿಯಾದ ಬಳಿಕ ನನಗೆ ನಿದ್ದೆ ಬರುತ್ತಿತ್ತು. ಸಾಯಂಕಾಲ ನಿದ್ದೆ ಮಾಡಿದರೆ ಅಲ್ಪಾಯು ವಾಗುತ್ತೇವೆಂದು ಶ್ರೀಮಾತೆ ಹೇಳುತ್ತಿದ್ದರು. ಶ್ರೀಮಾತೆ ಸ್ವತಃ ತಾವೇ ಠಾಕೂರರ ಚಿತ್ರದ ಮುಂದೆ ಆಸನದಲ್ಲಿ ಕುಳಿತು ಕೊಳ್ಳುತ್ತಿದ್ದರು. ಅವರಿಗೆ ಜಪ, ಧ್ಯಾನ ಮಾಡಲು ಸ್ವಲ್ಪವೇ ಸ್ವಲ್ಪ ಸಮಯ ಸಿಗುತ್ತಿತ್ತು. ಅವರು ಮೆಲುದನಿಯಿಂದ ಹಾಡಿ ಕೊಳ್ಳುತ್ತಿದ್ದರು; ತಮ್ಮೊಂದಿಗೆ ದನಿ ಸೇರಿಸಿ ಹಾಡುವಂತೆ ನನಗೂ ಅವರು ಹೇಳುತ್ತಿದ್ದರು. ಮೊದಮೊದಲು ನನಗೆ ಗೊತ್ತಾಗಲಿಲ್ಲ, ಅನಂತರ ನೋಡುತ್ತೇನೆ, ಶ್ರೀಮಾತೆಯವರ ಕಂಠ ಎಷ್ಟೊಂದು ಮಧುರ! ನಾನು ಶ್ರೀಮಾತೆಯವರ ಸ್ವರವನ್ನು ಅನುಕರಿಸುತ್ತಿದ್ದೆ. ಅನಂತರ ಶ್ರೀಮಾತೆ ಹೇಳುತ್ತಿದ್ದರು, ''ಈಗ ಹೇಳು, ಇವತ್ತು ಏನೇನು ಓದಿದೆ? ನೀನು ಓದಿದ್ದನ್ನು ಕೇಳುತ್ತ ನಾನೂ ಒಂದಿಷ್ಟು ಕಲಿಯುತ್ತೇನೆ. ಈಗ ನನಗೆ ಸ್ವಲ್ಪ ಕಲಿಸು.''

ಶ್ರೀಮಾತೆ ಕಲಿಸುತ್ತಿದ್ದ ರೀತಿ ಸಂಪೂರ್ಣ ಬೇರೆಯೇ ರೀತಿ ಯದು. ಅವರು ಕಲಿಸುತ್ತಿದ್ದಾರೆ ಎನ್ನುವುದೇ ಗೊತ್ತಾಗುತ್ತಿರಲಿಲ್ಲ. ಅವರು ಹೇಳುತ್ತಿದ್ದರು, ''ತಪ್ಪನ್ನು ತಿದ್ದಬೇಕು. ಆದರೆ ವ್ಯಕ್ತಿಯನ್ನು ತಪ್ಪಿತಸ್ಥನನ್ನಾಗಿ ಮಾಡಬಾರದು. ಇನ್ನೊಬ್ಬರ ದೋಷವನ್ನು ನೋಡುವ ಮೊದಲು ನಮ್ಮಲ್ಲೇ ದೋಷ ಬೆಳೆದುಬಿಡುತ್ತದೆ.''

ಒಂದು ದಿನ ನಡೆದ ಘಟನೆಯೊಂದು ಮನಸ್ಸಿಗೆ ಬರು ತ್ತಿದೆ. ನನಗಾಗ ಏಳು ವರ್ಷ ಕಳೆದು ಎಂಟನೇ ವರ್ಷ ನಡೆಯುತ್ತಿತ್ತು. ಒಂದು ಬೆಕ್ಕು ಶ್ರೀಮಾತೆಯವರ ಕಾಲ ಬಳಿ ಸುತ್ತಾಡುತ್ತಿತ್ತು; ಆದರೆ ಕೋಣೆಯಲ್ಲಿ ಯಾವುದೇ ವಸ್ತುವಿಗೆ ಬಾಯಿ ಹಾಕುತ್ತಿರಲಿಲ್ಲ. ಅದೂ ಶ್ರೀಮಾತೆಯವರ ಸಂಸಾರದ ಒಬ್ಬ ಸದಸ್ಯನಾಗಿ ಬಿಟ್ಟಿತು. ಒಂದು ದಿನ ಯಾವ ಕಾರಣಕ್ಕಾಗಿ ಎಂದು ನೆನಪಿಲ್ಲ, ನನ್ನ ಊಟದ ತಟ್ಟೆಗೆ ಬಾಯಿಹಾಕಿತು. ನನಗೆ ತುಂಬಾ ಕೋಪ ಬಂದುಬಿಟ್ಟಿತು. ಕೋಪ ತಡೆಯಲಾಗದೆ ನನ್ನ ಕೈಯಲ್ಲಿದ್ದ ಬೀಸಣಿಗೆಯ ಹಿಡಿಯಿಂದ ಅದಕ್ಕೆರಡು ಏಟು ಕೊಟ್ಟುಬಿಟ್ಟೆ. ಬೆಕ್ಕು 'ಮ್ಯಾಂವ್' 'ಮ್ಯಾಂವ್' ಎನ್ನುತ್ತ ಚೀರಿ, ಶ್ರೀಮಾತೆಯವರ ಕಾಲುಗಳ ಹಿಂದೆ ಅಡಗಿ ಮುಖವನ್ನು ಉಜ್ಜ ತೊಡಗಿತು. ಅತ್ತ ನೋಡಿದೆ, ಶ್ರೀಮಾತೆ ''ಅಯ್ಯೋ!'' ಎನ್ನುತ್ತ ಎದ್ದು ನಿಂತು ಒಂದು ರೀತಿ ಬದಲಾಗಿಬಿಟ್ಟರು. ಅವರು ಹೇಳತೊಡಗಿದರು, ''ಏನು ಮಾಡಿದೆ! ಏನು ಮಾಡಿದೆ!'' ನಾನು ಅಪ್ರತಿಭಳಾದೆ. ನಾನು ಶ್ರೀಮಾತೆಯವರ ಬಳಿಗೆ ಹೋಗಿ ಅವರ ಮಡಿಲನ್ನು ಹಿಡಿದುಕೊಂಡು, ''ಏನಾಯಿತಮ್ಮಾ?'' ಎಂದು ಕೇಳಿದೆ. ಶ್ರೀಮಾತೆ ಒಂದು ಕ್ಷಣ ತಮ್ಮನ್ನು ತಾವು ಸಮಾಧಾನ ಮಾಡಿಕೊಂಡು ಹೇಳಿದರು, ''ನೋಡು ಭವಿ, ನೀನೇಕೆ ಬೆಕ್ಕನ್ನು ಆ ರೀತಿ ಹೊಡೆದುಬಿಟ್ಟೆ?'' ನಾನು ಅವರ ಕರುಣಾಮಯವಾದ ಮುಖವನ್ನೆ ನೋಡುತ್ತ ನಿಂತೆ. ಅವರು ಒಂದೇ ಒಂದು ಕಟುವಾದ ಮಾತನ್ನೂ ಆಡಲಿಲ್ಲ ; ಬೆಕ್ಕಿನ ಮರಿಯನ್ನು ಮಡಿಲಲ್ಲಿಟ್ಟುಕೊಂಡು ತಡವಿದರು. ಅದರಿಂದಲೇ ನನಗೆ ತಕ್ಕ ಶಾಸ್ತಿಯಾಯಿತು. ಮುಂದೆಂದೂ ನಾನು ನಾಯಿ, ಬೆಕ್ಕುಗಳ ಮೇಲೆ ಕೈಮಾಡಲಿಲ್ಲ.

ಠಾಕೂರ್ ಹಾಗೂ ಶ್ರೀಮಾತೆಯವರ ಮಾತುಗಳು ಅಮೃತ ಸಮಾನ. ಅವುಗಳ ಬಗ್ಗೆ ಹೇಳಿದಷ್ಟೂ ಮುಗಿಯದು. ಸಣ್ಣ ಸಂಗತಿಯಿಂದ ಹಿಡಿದು ದೊಡ್ಡ ವಿಷಯದವರೆಗೆ ಯಾವುದೇ ಆಗಿರಲಿ, ಶ್ರೀಮಾತೆಯವರ ಗಮನಕ್ಕೆ ಬಾರದಿರುತ್ತಿರಲಿಲ್ಲ. ಶ್ರೀಮಾತೆಯವರು ನನ್ನನ್ನು ತಾವೇ ಠಾಕೂರರ ಮಲಗುವ ಕೋಣೆಗೆ ದಿನದಲ್ಲಿ ಎರಡು ಬಾರಿ ಕರೆದುಕೊಂಡು ಹೋಗು ತ್ತಿದ್ದರು. ಕಸಬರಿಕೆಯಿಂದ ಹೇಗೆ ಗುಡಿಸಬೇಕು, ಗುಡಿಸಿದ ನಂತರ ಕಸಬರಿಕೆಯನ್ನು ಹೇಗೆ ಇಡಬೇಕು ಎಂದೆಲ್ಲ ಕಲಿಸಿಕೊಡು ತ್ತಿದ್ದರು. ಯಾವುದೇ ವಸ್ತುವನ್ನಾದರೂ ಸರಿ, ಅದರ ಜಾಗದಲ್ಲೇ ಇಡಬೇಕು; ಕತ್ತಲಲ್ಲೂ ಕೂಡ ಅದು ಕೈಗೆ ಸಿಗುವಂತಿರಬೇಕು. ನೀರಿನ ಹಂಡೆಯಲ್ಲಿ ಎಷ್ಟು ನೀರಿರಬೇಕು, ಅದರ ಮುಚ್ಚಳವನ್ನು ಹೇಗೆ ಮಧ್ಯಭಾಗದಲ್ಲಿರುವಂತೆ ಮುಚ್ಚಬೇಕು; ಆಸನ, ಚಾಪೆ ಗಳನ್ನು ಹಾಸುವುದು ಇವನ್ನೆಲ್ಲ ಅಚ್ಚುಕಟ್ಟಾಗಿ ಮಾಡಬೇಕು, ಅಡ್ಡಾದಿಡ್ಡಿ ಮಾಡಬಾರದು. ನಿತ್ಯಪೂಜೆಗೆ ಉಪಯೋಗಿಸುವ ವಸ್ತುಗಳನ್ನು ತೊಳೆದು ಒರೆಸಿ ಜೋಡಿಸಿಡುವುದು, ತಾಂಬೂಲ ಗಳನ್ನು ಸಿದ್ಧಪಡಿಸಿ ಇಡುವುದು, ಠಾಕೂರರ ಚಪ್ಪಲಿಗಳನ್ನು ಸ್ವಚ್ಛಗೊಳಿಸುವುದು – ಹೀಗೆ ಯಾವುದನ್ನೂ ಅವರು ಬಿಡುತ್ತಿರಲಿಲ್ಲ. ಶ್ರೀಮಾತೆ ತಾವೇ ಅವುಗಳನ್ನು ಮಾಡುತ್ತ ತೋರಿಸಿಕೊಡುತ್ತಿದ್ದರು. ಅವರು ಹೇಳುತ್ತಿದ್ದರು, ''ಹೆಣ್ಣುಮಕ್ಕಳು ಸದ್ದು ಮಾಡುತ್ತಾ ಓಡಾಡಬಾರದು, ಜೋರಾಗಿ ನಗಬಾರದು. ಮೊಣಕಾಲ ಮೇಲೆ ಬಟ್ಟೆಬರೆ ಎಳೆದುಕೊಳ್ಳಬಾರದು. ಉಚ್ಚ ಕಂಠದಿಂದ ಮಾತನಾಡಬಾರದು. ಅದೇ ರೀತಿ ಸಣ್ಣದಾಗಿ ಗೊಣಗುಟ್ಟುವುದೂ ಸಲ್ಲದು. ಎಲ್ಲಿಗಾದರೂ ಹೋಗುವಾಗ ದುರ್ಗಾನಾಮವನ್ನು ಹೇಳಿಕೊಳ್ಳುತ್ತಾ ಹೋಗಬೇಕು. ಯಾರನ್ನೂ ಹಿಂದಿನಿಂದ ಕರೆಯಬಾರದು. ಗಾಡಿಯಿಂದ ಅಥವಾ ದೋಣಿಯಿಂದ ಇಳಿಯುವಾಗ ಮೊದಲು ಇಳಿಯ ಬೇಕು, ಕೊನೆಯಲ್ಲಿ ಇಳಿಯಬಾರದು. ಎಲ್ಲರೊಂದಿಗೆ ನಗುತ್ತ ಮಾತುಕತೆ ನಡೆಸಬೇಕು; ಯಾರಿಗೂ ನೋವಾಗುವಂತೆ ಮಾತನಾಡಕೂಡದು.''

ಶ್ರೀಮಾತೆ ಏಳುತ್ತ, ಕುಳಿತುಕೊಳ್ಳುತ್ತ ಏನೆಲ್ಲ ಹೇಳುತ್ತಿದ್ದರೋ ಅವೆಲ್ಲ ಸಿಹಿತಿಂಡಿಯಂತೆ ಮಧುರವಾಗಿರುತ್ತಿದ್ದವು! ಅದೆಲ್ಲ ವನ್ನೂ ನೆನಪಿನಲ್ಲಿಟ್ಟುಕೊಳ್ಳಲಾಗುವುದೆ? ಠಾಕೂರ್‌ಗೆ ಪ್ರಣಾಮ ಮಾಡದೆ ಯಾವುದೇ ಕೆಲಸ ಮಾಡಬಾರದು ಎಂದು ನಾನು ಅವರಿಂದ ಕಲಿತೆ.